ಗ್ಲಾಸು ಬಾಯಾರಿಕೆ ಬಿಡಿ, ಒಂದು ತುಂಡು ಬಾಯಿಗೂ ಕೊಡ್ಲಿಲ್ಲ ಅಂದ್ರೆ? ಅಂತಕ್ಕ ಹೋದದ್ದೇ ಹೋದದ್ದು. ಆ ಮನೆಯ ಪೊಲ್ಲು ಹೋಯಿತು." "ಅದು ಹೌದು ಮಾರಾಯ್ತಿ. ಮತ್ತೆ ಈ ಕೋರೋಣ ಬಂದು ಬೊಂಬಾಯಿ, ಬೆಂಗಳೂರಲ್ಲಿ ಎಲ್ಲ ಸಾಲು ಸಾಲು ಜನ ಸತ್ರಂತಲ್ಲ? ಸತ್ತವರ ಶರೀರ ಮಣ್ಣು ಮಾಡ್ಲಿಕ್ಕೂ ಕುಟುಂಬಸ್ತರಿಗೆ ಕೊಡುವುದಿಲ್ಲಂತೆ. ಆಸ್ಪತ್ರೆಯವರೇ ಗುಂಡಿ ತೆಗೆದು ಮುಚ್ಚುವುದಂತೆ. ಎಷ್ಟು ಕೋಟಿ ಇದ್ದವನದ್ದೂ ಇದೇ ಕತೆ ಅಂತೆ ಮಾರಾಯ್ತಿ. ನಮ್ಮ ರಮೇಶ ಕೂಡ ಹಾಗೆಯ. ಈಗ ಆಫೀಸಿಂದ ಬಂದ್ರೆ ಹೊರಗಿನ ಬಚ್ಚಲಲ್ಲಿ ಸ್ನಾನ ಮಾಡಿಯೇ ಒಳಗೆ ಬರುವುದು. ಮುಖಕ್ಕೆ ಅದೆಂತದ್ದೋ ಮಸ್ಕು ಅಂತೆ. ಅದನ್ನು ಕಟ್ಟಿಯೇ ಹೋಗುವುದು. ಮಾಲಿ ಕೂಡ ಅಷ್ಟೇ. ನಂಗೂ ತಂದು ಕೊಟ್ಟಿದ್ದಾನೆ." "ಮಸ್ಕಾ? ಅದು ನಂಗೂ ಸಿಕ್ಕಿದೆ. ಕಳೆದ ತಿಂಗಳೇ ಪಾರ್ಟಿಯವರು ಮನೆಗೆ ತಂದುಕೊಟ್ಟಿದ್ದಾರೆ. ನಮ್ಮಲ್ಲೂ ಎಲ್ಲರು ಕಟ್ತಾರೆ. ನಾನು ಒಮ್ಮೆ ಕಟ್ಟಿ ನೋಡಿದೆ. ಎರಡೇ ನಿಮಿಷದಲ್ಲಿ ದಮ್ಮು ಬಂದಾದ ಹಾಗೆ ಆಯ್ತು ಮಾರಾಯರೇ. ಮತ್ತೆ ಸಾವಿನದ್ದು... ನಮ್ಮ ಬಾಯಿ ವಾಸನೆ ನಮಗೇ ಬರ್ತದೆಂತ! ನಾನು ತೆಗೆದು ನಮ್ಮ ಚುಕ್ಕುನ ಮಗನಿಗೆ ಕೊಟ್ಟೆ. ಅಷ್ಟರ ಮೇಲೆ ರೋಗ ಬಂದು ಸತ್ತರೆ ಸಾಯಲಿ. ಯಾರಿಗೂ ನಷ್ಟ ಇಲ್ಲ. ಮಾರಿ ಹೋಯ್ತು ಅಂತ ಬೊಜ್ಜದ ಊಟ ಉಂಡಾರು." ಮಾಂಕು ಮೂಲ್ಯೆದಿಯ ಸ್ವರ ಭಾರವಾದಾಗ ಅಕ್ಕು ಪೂಜಾರ್ತಿಗೂ ಸಂಕಟವಾಯಿತು.

'ಪಾಪ ಮಾಂಕು... ತನ್ನ ಹಾಗೆ ಹುಟ್ಟಿನಿಂದಲೇ ಬಂಗ್ಡ ಬಂದ ಜೀವ. ಇವತ್ತೂ ಕೂಡ ಆ ಬಂಗ್ಡ ತಪ್ಪಿಲ್ಲ. ಹೆಸರಿಗೆ ಮೂರು ಜನ ಗಂಡು ಮಕ್ಕಳು. ಒಂದೂ ನೇರ್ಪದ್ದಲ್ಲ. ಬಂದ ಸೊಸೆಯರೂ ಅಷ್ಟೇ. ತನಗಿಂತ ಒಂದೆರಡು ವರ್ಷ ಸಣ್ಣವಳೇ ಇರಬೇಕು. ಈಗಲೇ ಮುದುಕಿ, ಮುದುಕಿ ಆಗಿದ್ದಾಳೆ. ದುಡಿದು ತಿನ್ನುವ ಕಾಲದಲ್ಲಿ ಸೀರೆಯ ಬಣ್ಣ ಮಾಸಿದ್ದರೂ ಮಾಂಕುವಿನ ಮುಖದಲ್ಲಿ ನಗು ಮಾಸಿದ್ದು ಕಂಡ ನೆನಪಿಲ್ಲ. ಪೋಲಿ ಮಾತು ಆಡುವುದರಲ್ಲಿ ಎತ್ತಿದ ಕೈ. ಬಿತ್ತನೆ ಸಮಯದಲ್ಲಿ ಅವಳಾಡುತ್ತಿದ್ದ ಪೋಲಿ ಮಾತುಗಳಿಗೆ ಉಳಿದ ಹೆಂಗಸರೊಂದಿಗೆ ಅಂತಕ್ಕನ ನಗುವೂ ಕೆಲವೊಮ್ಮೆ ಜತೆಗೂಡುತ್ತಿತ್ತು. ಎಲ್ಲಿಯಾದರೂ ಗೋಪಾಲಣ್ಣ ಅಲ್ಲೇ ಹತ್ತಿರ ಇದ್ದರೆ ಮಾತ್ರ, "ಸಾಕು ಮಾಡೇ ಮಾರಾಯ್ತಿ. ನಿನ್ನ ದೊಂಡೆಗೆ ಕೋಲು ಹಾಕಿದ್ದು ಯಾರು?" ಎಂದು ಸುಮ್ಮನೆ ಗದರಿದಂತೆ ಮಾಡುತ್ತಿದ್ದರು. ಅಂತಕ್ಕನನ್ನೂ ಗೇಲಿ ಮಾಡದೆ ಬಿಡುತ್ತಿರಲಿಲ್ಲ ಈ ಮಾಂಕು. "ಅಲ್ಲ ಶೆಡ್ತಿಯರೇ... ನೀವು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಇಡೀ ದಿನ ನಮ್ಮೊಟ್ಟಿಗೆ ಗದ್ದೆಯಲ್ಲಿ ಕೂರುವುದು ಕೆಲಸ ನಡೀತದ ಅಂತ ನೋಡ್ಲಿಕ್ಕಾ?... ಅಥವಾ ಶೆಟ್ರು ನಮ್ಮನ್ನು ನೋಡ್ತಾರಾ ಅಂತ ಸಿಐಯ್‌ಡಿ ಮಾಡ್ಲಿಕ್ಕಾ" ಹೆಂಗಸರ ನಗು ಉಕ್ಕೇರುತ್ತಿದ್ದರೆ ಅಂತಕ್ಕ ಕಿವಿ ಕೇಳದ ಹಾಗೆ ಇನ್ನೊಂದು ಹಂತಿಗೆ ಸಾಗುತ್ತಿದ್ದರು. ಕಟ್ಟೆಪುಣಿಯಿಂದ ಬಾಗಿ ನೇಜಿ ನೆಡುತ್ತಿದ್ದ ಹೆಂಗಸರ ಮೇಲೆ ವಕ್ರ ವಕ್ರವಾಗಿ ಹರಿದಾಡುತ್ತಿದ್ದ ಗೋಪಾಲಣ್ಣನ ನೋಟ ಪಕ್ಕನೆ ಬೇರೆಲ್ಲೋ ಹರಿಯುತ್ತಿತ್ತು. ಮಾರಾಯ್ತಿಯ ನಾಲಿಗೆ ಹಾಳಾದರೂ ಕೆಲಸದಲ್ಲಿ ಮಾತ್ರ ಭಾರೀ ಬಿರ್ಸದಿ. ಓ ಬೇಲೇ ಪದಗಳನ್ನು ಅವಳಿಂದ ಕೇಳಬೇಕು. ಪದ ಕಟ್ಟುವುದರಲ್ಲೂ ಒಂದನೇ ನಂಬರ್. ಆದುದರಿಂದಲೇ ಅವಳ ವಕ್ರೋಕ್ತಿಗಳನ್ನು ಕೇಳಿಯೂ ಕೇಳದಂತೆ ನಟಿಸುತ್ತಿದ್ದರು ಅಂತಕ್ಕ. "ಹುಟ್ಟಿದ ಮನುಷ್ಯ ಬದುಕಿನಲ್ಲಿ ಒಮ್ಮೆಯಾದರೂ ಸುಖ ಕಾಣಬೇಕು... ನಮ್ಮ ಹಣೆಬರಹವನ್ನು ಬ್ರಮ್ಮ ಕೊತ್ತಲಿಗೆಯಲ್ಲಿ ಬರೆದಿರಬೇಕು." ಅನ್ನುತ್ತಿದ್ದ ಅಮ್ಮನ ಮಾತು ಇತ್ತೀಚೆಗೆ ಮಾಂಕುವನ್ನು ಕಾಣುವಾಗೆಲ್ಲಾ ನೆನಪಾಗುತ್ತಿತ್ತು. ಹಾಗಂತ ಅಮ್ಮನ ಕೊನೆಗಾಲದಲ್ಲಿ ಸ್ವಲ್ಪವಾದರೂ ಸುಖ ಸಿಕ್ಕಿರಬೇಕು ಅವಳಿಗೆ. ತನ್ನಿಂದಾಗುವಷ್ಟು ಚಾಕರಿ ತಾನೂ ಮಾಡಿದ್ದೆ. ರಮೇಶನೂ ಅಜ್ಜಿಯನ್ನು ಕೂಡುವಷ್ಟು ಆರೈಕೆ ಮಾಡಿದ್ದ. ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ನೋಡುವ ಆಶೆ ಒಂದು ಬಾಕಿಯಾಯ್ತು ಮುದುಕಿಗೆ. ಅಕ್ಕು ಪೂಜಾರ್ತಿ ನಿಟ್ಟುಸಿರಿಟ್ಟಳು.

ಅಕ್ಕು ಪೂಜಾರ್ತಿಯ ಅನ್ಯಮನಸ್ಕತೆಯನ್ನು ಗಮನಿಸಿಯೋ ಏನೋ?... "ನಾನಿನ್ನು ಹೊರಡ್ತೇನೆ